ರುಚಿಕರವಾದ ಉಪಹಾರ
ಸಿಹಿ–ಖಾರ ತಿಂಡಿಗಳು
ನ್ಯೂ ಕೋರ್ಟ್ ರೆಸ್ಟೋರೆಂಟ್
ಹೊಸ ಬಸ್‌ಸ್ಟ್ಯಾಂಡ್ ಬಳಿ
ಕುಂದಾಪುರ
ಫೋ : 232878

www.kundaprabha.com e-mail : kundaprabha@gmail.com

# ಕುಂದಪ್ರಭ

ವಾರಪತ್ರಿಕೆ

ಸ್ಥಾಪನೆ : 1948
7 ದಶಕಗಳ ವಿಶ್ವಾಸನೀಯ ಸೇವೆಯಲ್ಲಿ
ಶೇಟ್ ಜ್ಯುವೆಲ್ಲರ್ಸ್
ಶಂಕರ್ ಶೇಟ್ ಬಿಲ್ಡಿಂಗ್
ಮುಖ್ಯರಸ್ತೆ, ಕುಂದಾಪುರ
ಫೋನ್ : 230242

॥ ಸಂಪುಟ : 31 ॥ ಸಂಚಿಕೆ : 35। UDP/1263/2021-23 || RNI.NO.50495/91 ॥ ತಾರೀಕು: 05–10–2021 ॥ ರೂ 5/– ॥ ವಾರ್ಷಿಕ ಚಂದಾ : 350/– ಅಂಚೆಯಲ್ಲಿ : 500/

## ಅಕ್ರಮ ಗೋ ಹಂತಕರ ವಿರುದ್ಧ ಕ್ರಮಕ್ಕೆ ಒತ್ತಾಯಿಸಿ

# ಗಂಗೊಳ್ಳಿಯಲ್ಲಿ ಬೃಹತ್ ಪ್ರತಿಭಟನೆ

ಕಾನೂನು ಬಾಹಿರ ಕೃತ್ಯ ಎಸಗುವ ಕೆಲವು ಅಪರಾಧಿಗಳ ಹಾಗೂ ಅನಾವಶ್ಯಕವಾಗಿ ಕಿಡಿಗೇಡಿತನ ಮಾಡಿ ಅಶಾಂತಿ ಉಂಟುಮಾಡುವ ಕೆಲವು ಕಿಡಿಗೇಡಿಗಳಿಂದ ಗಂಗೊಳ್ಳಿಯಲ್ಲಿ ಸಮಸ್ಯೆ ಉಂಟಾಗುತ್ತಿದೆ. ಗೋ ಹತ್ಯೆ ವಿರೋಧಿಸಿ ಈ ಹಿಂದೆಯೂ ಗಂಗೊಳ್ಳಿಯಲ್ಲಿ ಪ್ರತಿಭಟನೆಗಳು ನಡೆದಿದ್ದು ಆದರೂ ಪರಿಸ್ಥಿತಿ ಅರಿಯದೇ ಕೆಲವರು ಇನ್ನಷ್ಟು ಪ್ರಚೋದನೆ ಮಾಡುವ ಕೃತ್ಯ ಎಸಗುತ್ತಿರುವುದು ಜನರ ಆಕ್ರೋಶಕ್ಕೆ ಕಾರಣವಾಗಿದೆ. ಪ್ರತಿಭಟನೆ ಮಾಡುವವರೊಂದಿಗೆ ಸೇರಿಕೊಂಡ ಕೆಲವು ಜನರಿಂದ ಪ್ರತಿಭಟನೆಯ ಮೂಲ ಉದ್ದೇಶವೂ ಮರೆಯಾಗಿ ಹೋಗುವ ಬೆಳವಣಿಗೆಯೂ ನಡೆಯುತ್ತಲಿದೆ. ಸಂಬಂಧಪಟ್ಟ ಇಲಾಖೆಗಳು ಅಹಿತಕರ ಬೆಳವಣಿಗೆಯನ್ನು ಗಂಭೀರವಾಗಿ ಪರಿಗಣಿಸಬೇಕಾಗಿದೆ.




ಹಿಂದೂ ಜಾಗರಣ ವೇದಿಕೆ ಗಂಗೊಳ್ಳಿ ನೇತೃತ್ವದಲ್ಲಿ ಗೋಹತ್ಯೆ ವಿರೋಧಿಸಿ ಹಾಗೂ ಗೋ ಹಂತಕರನ್ನು ಗಡಿಪಾರು ಮಾಡಲು ಆಗ್ರಹಿಸಿ ಗಂಗೊಳ್ಳಿಯಲ್ಲಿ ಬೃಹತ್ ಪ್ರತಿಭಟನೆ ನಡೆಯಿತು.

ಕರ್ನಾಟಕ ದಕ್ಷಿಣ ಪ್ರಾಂತ್ಯದ ಪ್ರಧಾನ ಕಾರ್ಯದರ್ಶಿ ಟಿ.ಕೆ. ಉಲ್ಲಾಸ್ , ಹಿಂದೂ ಜಾಗರಣ ವೇದಿಕೆ ಮಂಗಳೂರು ವಿಭಾಗದ ಪ್ರಧಾನ ಕಾರ್ಯದರ್ಶಿ ಪ್ರಕಾಶ್ ಕುಕ್ಕೆಹಳ್ಳಿ, ಉಡುಪಿ ಜಿಲ್ಲಾಧ್ಯಕ್ಷ ಪ್ರಶಾಂತ್ ನಾಯಕ್, ಗಂಗೊಳ್ಳಿಯ ಅಧ್ಯಕ್ಷ ಗೋವಿಂದ ಶೇರುಗಾರ್, ಹಿಂದೂ ಸಂಘಟನೆಗಳ ಮುಖಂಡರಾದ ವಾಸುದೇವ ಗಂಗೊಳ್ಳಿ, ನವೀನ್ ಗಂಗೊಳ್ಳಿ, ಯಶವಂತ್ ಗಂಗೊಳ್ಳಿ, ಮಹೇಶ್ ಬೈಂದೂರು ಮತ್ತಿತರು ಮುಂಚೂಣಿಯಲ್ಲಿದ್ದರು.

**ಬೃಹತ್ ಪಾದಯಾತ್ರೆ :** ಗೋಹತ್ಯೆ ವಿರೋಧಿಸಿ, ಗಂಗೊಳ್ಳಿಯ ಮೀನುಗಾರಿಕಾ ಬಂದರಿನಿಂದ ರಾಮ ಮಂದಿರದವರೆಗಿನ ಸುಮಾರು 3 ಕಿ.ಮೀ. ವರೆಗೆ ಬೃಹತ್ ಪಾದಯಾತ್ರೆ ನಡೆಯಿತು. ಮಹಿಳೆಯರು, ಯುವತಿಯರು, ಮಕ್ಕಳು ಸೇರಿದಂತೆ ಪಾದಯಾತ್ರೆಯು ಶ್ರೀ ವೀರೇಶ್ವರ ದೇವಸ್ಥಾನದ ಬಳಿ ಸಮಾಪನಗೊಂಡು, ಬಳಿಕ ಪ್ರತಿಭಟನೆ ಸಭೆ ನಡೆಯಿತು. ಪ್ರತಿಭಟನೆ ಹಿನ್ನೆಲೆಯಲ್ಲಿ ಗಂಗೊಳ್ಳಿಯಲ್ಲಿ ಎಲ್ಲ ಅಂಗಡಿ ಮುಂಗಟ್ಟುಗಳನ್ನು ಸ್ವಯಂ ಪ್ರೇರಿತವಾಗಿ ಬಂದ್ ಮಾಡಲಾಗಿತ್ತು. ಮೀನುಗಾರಿಕಾ ಚಟುವಟಿಕೆಯು ಸಂಪೂರ್ಣ ಸ್ತಬ್ದವಾಗಿತ್ತು.

**ಬಿಗಿ ಪೋಲೀಸ್ ಬಂದೋ ಬಸ್ತ್ :**

ಯಾವುದೇ ಅಹಿತಕರ ಘಟನೆಗಳು ಸಂಭವಿಸದಂತೆ ರಾಜ್ಯ ಮೀಸಲು ಪೋಲೀಸ್ ಪಡೆ, ಜಿಲ್ಲಾ ಮೀಸಲು ಪಡೆ, ನಕ್ಸಲ್ ನಿಗ್ರಹ ಪಡೆ, ವಿವಿಧ ಠಾಣೆಗಳ ಪೋಲೀಸರನ್ನು ಭದ್ರತೆಗಾಗಿ ನಿಯೋಜಿಸಲಾಗಿತ್ತು. ಹೆಚ್ಚುವರಿ ಎಸ್.ಪಿ. ಕುಮಾರಚಂದ್ರ , ಗುಪ್ತಚರ ವಿಭಾಗದ ಎಸ್.ಪಿ. ಪ್ರವೀಣ್ ನಾಯಕ್ ಭೇಟಿ ನೀಡಿ ಪರಿಶೀಲಿಸಿದರು. ಕುಂದಾಪುರ ಡಿವೈಎಸ್‌ಪಿ. ಶ್ರೀಕಾಂತ್ ನೇತೃತ್ವದಲ್ಲಿ ವೃತ್ತ ನಿರೀಕ್ಷಕರಾದ ಕುಂದಾಪುರದ ಗೋಪಿಕೃಷ್ಣ, ಬೈಂದೂರಿನ ಸಂತೋಷ್ ಕಾಯ್ಕಿಣಿ, ಗಂಗೊಳ್ಳಿ ಎಸ್.ಐ. ನಂಜಾ ನಾಯ್ಕ್, ಇತರ ಠಾಣೆಗಳ ಠಾಣಾಧಿಕಾರಿಗಳು, ಸಿಬಂದಿ ಬಂದೋಬಸ್ತ್ ಬಗ್ಗೆ ನಿಗಾ ವಹಿಸಿದ್ದರು.

ಈ ಪ್ರತಿಭಟನೆ ರಾಜ್ಯಮಟ್ಟದಲ್ಲಿ ಸುದ್ದಿಯಾಗಿದ್ದು ಹಲವು ನಾಯಕರು ಸಹ ಈ ಬಗ್ಗೆ ಮಾಧ್ಯಮಗಳಲ್ಲಿ ಪ್ರತಿಕ್ರಿಯೆ ವ್ಯಕ್ತ ಪಡಿಸಿದರು.

ಗೋಹತ್ಯೆ ವಿರೋಧಿಸಿ ಹಿಂದೂ ಸಂಘಟನೆಗಳಿಂದ ನಡೆದ ಪ್ರತಿಭಟನೆಯಲ್ಲಿ ಅಹಿತಕರ ಘೋಷಣೆ ಕೂಗಿದ ಮೂವರು, ಕೋವಿಡ್ ಮಾರ್ಗಸೂಚಿಯಂತೆ ಪ್ರತಿಭಟನೆಯಲ್ಲಿ ಜನಸೇರಿಸಲು ಅನುಮತಿಯಿಲ್ಲದಿದ್ದರೂ ಉಲ್ಲಂಘಿಸಿದವರು 8 ಮಂದಿ ಸೇರಿದಂತೆ ಒಟ್ಟು 11 ಮಂದಿಯನ್ನು ಪೋಲೀಸರು ಬಂಧಿಸಿದ್ದಾರೆ.

ಸೆ.28 ರಂದು ಅನುಮತಿ ಪಡೆಯದೇ ಸಭೆಸೇರಿದ್ದಕ್ಕೆ ಮಜೀದ್, ಇಷ್ಟಿಕರ್ ಹಾಗೂ ತಬೀಶ್ ಅವರನ್ನು ಬಂಧಿಸಲಾಗಿದೆ. ಅ.1 ರಂದು ನಡೆದ ಪ್ರತಿಭಟನೆಯಲ್ಲಿ ಅಹಿತಕರ ಘೋಷಣೆ ಕೂಗಿದ ನವೀನ್ , ಅಂಬರೀಶ್ ಹಾಗೂ ಪರ್ವಿಶ್‌ನ್ನು ಬಂಧಿಸಲಾಗಿದೆ. ಇನ್ನು ಕೋವಿಡ್ ನಿಯಮಾವಳಿ ಉಲ್ಲಂಘಿಸಿ ಪ್ರತಿಭಟನೆಯಲ್ಲಿ ಜನ ಸೇರಿಸಿದ್ದಕ್ಕೆ ಅಕ್ಷಯ್, ವಿವೇಕ್ , ರಾಘವೇಂದ್ರ , ಅಕ್ಷಯ್ ಹಾಗೂ ಮಹೇಶ್ ಅವರನ್ನು ಬಂಧಿಸಿದ್ದಾರೆ. ಗಂಗೊಳ್ಳಿ ಪೋಲೀಸ್ ಠಾಣೆಯಲ್ಲಿ ಮೂರು ಪ್ರತ್ಯೇಕ ಪ್ರಕರಣ ದಾಖಲಾಗಿದೆ. ಪ್ರತಿಭಟನೆಯಲ್ಲಿ ಭಾರಿ ಸಂಖ್ಯೆಯಲ್ಲಿ ಮಹಿಳೆಯರು ಭಾಗವಹಿಸಿದ್ದು ಪೋಲೀಸರಿಗೆ ಸಮಸ್ಯೆಯಾಗಿತ್ತು.

# ಸ್ವಾತಂತ್ರ್ಯ ಹೋರಾಟಗಾರರು

## ತಾಳ ಮದ್ದಳೆ ವೀರ – ಓಣಿಮನೆ ಅಣ್ಣಪ್ಪ ಕಾರಂತ್

ಕರಾವಳಿಯ ಸ್ವಾತಂತ್ರ್ಯ ಹೋರಾಟಗಾರರ ಚರಿತ್ರೆಯಲ್ಲಿ ಕೋಣಿ ಅಣ್ಣಪ್ಪ ಕಾರಂತರ ಉಲ್ಲೇಖ ಇದ್ದೇ ಇರುತ್ತದೆ. ಓಣಿಮನೆ ಸುಬ್ರಾಯ ಕಾರಂತರ ಮೂವರು ಮಕ್ಕಳಲ್ಲಿ ಕಿರಿಯವರಾದ ಇವರು ಪ್ರಾಥಮಿಕ ಶಾಲಾ ಹಂತದಲ್ಲಿಯೇ ನಾಯಕತ್ವ ಗುಣ ಹೊಂದಿದವರು. ನೇರ ಮಾತು, ಸಾಧಿಸಬೇಕೆಂಬ ಛಲ, ಅನ್ಯಾಯದ ವಿರುದ್ಧ ಧ್ವನಿ ಎತ್ತುವ ಧೈರ್ಯದಿಂದ ಎಲ್ಲರ ಗಮನ ಸೆಳೆದವರು.

ಕುಂದಾಪುರದ ಬೋರ್ಡ್ ಹೈಸ್ಕೂಲ್‌ನಲ್ಲಿ ಮೆಟ್ರಿಕ್ ಮುಗಿಸಿ, ಆನಂತರ ಅದೇ ಶಾಲೆಯಲ್ಲಿ ಅಧ್ಯಾಪಕರಾಗಿ ಸೇರಿದವರು. ಕೋಟ ಶಿವರಾಮ ಕಾರಂತರಿಗೂ ಒಂದು ವರ್ಷ ಕಲಿಸಿದವರು.

ಆದರೆ ಅಂದು ತಾಲ್ಲೂಕು ಬೋರ್ಡ್ ಅಧ್ಯಕ್ಷರಾಗಿದ್ದ ನರಸಿಂಹ ಕಾರಂತರಿಗೂ ಇವರಿಗೂ ಅಭಿಪ್ರಾಯ ಭೇದಗಳು ಬಂದಾಗ ಅಣ್ಣಪ್ಪ ಕಾರಂತರಿಗೆ ಕಾರ್ಕಳಕ್ಕೆ ವರ್ಗಾವಣೆ ಮಾಡಲಾಯಿತು. ಆ ಕೂಡಲೇ ತನ್ನ ವೃತ್ತಿಗೆ ರಾಜಿನಾಮೆ ನೀಡಿದ ಕಾರಂತರು ತನ್ನ ಪತ್ನಿಯ ಹೆಸರಲ್ಲಿ "ಮೀನಾಕ್ಷಿ ಭವನ" ಆರಂಭಿಸಿ



ಹೋಟೇಲ್ ವ್ಯವಹಾರಕ್ಕೆ ಇಳಿದರು.

ಸ್ವಾತಂತ್ರ್ಯ ಹೋರಾಟದ ವಾತಾವರಣ ದೇಶಾದ್ಯಂತ ಮೂಡುತ್ತಿರುವ ಕಾಲದಲ್ಲಿ ಇವರು ಅಮಾಸೆಬೈಲ್ ಕೃಷ್ಣರಾಯ ಕೊಡ್ಗಿ, ಮಾನಂಜೆ ಕೃಷ್ಣಾನಂದ ರಾಯರು, ಮಲ್ಪೆ ಶಂಕರನಾರಾಯಣ ಸಾಮಗರು ಮುಂತಾದವರೊಡಗೂಡಿ ಕುಂದಾಪುರ ತಾಲ್ಲೂಕು ಪರಿಸರದಲ್ಲಿ ಚಳವಳಿ ನಡೆಸಿದರು.

ಗಾಂಧೀಜಿಯವರ ಕರೆಗೆ ಓಗೊಟ್ಟು ಉಪ್ಪು ತಯಾರು ಮಾಡುವುದು, ಕಾಂಗ್ರೆಸ್ ಧ್ವಜದೊಂದಿಗೆ ಚಳವಳಿ ನಡೆಸುವುದು, ಗಂಭೀರ ಸ್ವರೂಪದಲ್ಲಿ ನಡೆಯಿತು. ಉಪ್ಪಿನ ಸತ್ಯಾಗ್ರಹ ನಡೆಸಿ ಜೈಲು ಸೇರಿದಾಗ , ಜೈಲಿನ ಮಾಡಿನ ಹಂಚನ್ನು ತೆಗೆದು ಕಾಂಗ್ರೆಸ್ ಧ್ವಜ ಪ್ರದರ್ಶನ ಮಾಡಿದವರು.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಂಡ ಹಲವು. ಪ್ರಮುಖರಿಗೆ ಓಣಿಮನೆ ಅಣ್ಣಪ್ಪ ಕಾರಂತರು ಒಂದು ಸ್ಫೂರ್ತಿ. ಗಾಂಧೀಜಿಯವರ ಹರಿಜನೋದ್ಧಾರ, ಹಿಂದುಳಿದವರಿಗೆ ಶಿಕ್ಷಣದ ಬಗ್ಗೆ ಬಹಳ ಕಾಳಜಿ ವಹಿಸಿದವರು. ಪರಿಷತ್ ಭವನದಲ್ಲಿ ಪರಿಶಿಷ್ಟ ವರ್ಗದವರಿಗೆ ಶಾಲೆ ಮಾಡಿದವರು. ಮನೆಯಲ್ಲೂ ಅವರಿಗೆ "ಗುರುವಾಗಿ ಕಲಿಸಿದವರು. ದೇಶದ ಮಹಾನ್ ನಾಯಕರು ಕುಂದಾಪುರಕ್ಕೆ ಬಂದಾಗ ಅವರ ಕಾರ್ಯಕ್ರಮ ಯಶಸ್ಸಿಗೆ ಶ್ರಮಿಸಿದವರು.

**ತಾಳಮದ್ದಲೆ ಅರ್ಥದಾರಿ :**

ಅಧ್ಯಾಪಕ , ಕೃಷಿಕರು, ಹೋಟೇಲ್ ಉದ್ಯಮಿ ಸ್ವಾತಂತ್ರ್ಯ ಹೋರಾಟಗಾರರು ಮುಂತಾಗಿ ಹೆಸರುಗಳಿಸಿದ ಅಣ್ಣಪ್ಪ ಕಾರಂತರಿಗೆ ಯಕ್ಷಗಾನ ತಾಳಮದ್ದಳೆ ಅಂದರೆ ಬಹಳ ಖುಷಿ. ಯಾವುದೇ ಪಾತ್ರ ಮಾಡಲು ಆ ಪಾತ್ರಕ್ಕೆ ಮಹತ್ವ ದೊರೆಯುವಂತೆ ವಾಕ್ಪಟುತ್ವ ಪ್ರದರ್ಶಿಸುತ್ತಿದ್ದರು.

(5ನೇ ಪುಟಕ್ಕೆ)

## ರಾಮಕೃಷ್ಣ ಭಟ್ ರಾಯಸರು

ಈಗಲೂ ನಮ್ಮ ನೆನಪಿನಲ್ಲಿ ಉಳಿದುಕೊಂಡವರು, ನಮ್ಮ ಜೊತೆಯಲ್ಲೇ ಇದ್ದಾರೆನೋ ಅನ್ನಿಸುವ ನಮ್ಮ ನಾಡು ಕಂಡ ಹಿರಿಯ ಮುತ್ಸದ್ದಿ, ಪ್ರಾಮಾಣಿಕ, ಅಪ್ರತಿಮ ದೇಶಭಕ್ತ,, ಗಾಂಧಿತಾತನನ್ನೇ ಹೋಲುವ ನಮ್ಮಜ್ಜ, ಸ್ವಾತಂತ್ರ್ಯ ಹೋರಾಟಗಾರ ದಿವಂಗತ ರಾಮಕೃಷ್ಣ ಭಟ್ ರಾಯಸರು ಕಳಂಜಿ, ಮುಖದಲ್ಲಿ ಅದೇ ತೇಜಸ್ಸು ,ಬಾಗಿದ ಬೆನ್ನು ಇಳಿಬಿದ್ದ ಜನೀವಾರ,ಅವರ ಸರಳ ಉಡುಪು. ಬಿಳಿ ಖಾದಿ ಪಂಚೆ,ಜುಬ್ಬ ಹೆಗಲ ಮೇಲೊಂದು ಶಾಲು,ಬಗಲಿಗೊಂದು ಛತ್ರಿ,ಮೂಗಿನ ನೇರಕ್ಕೆ ಇಳಿಸಿಕೊಂಡ ಕನ್ನಡಕ. ಪಕ್ಕಾ ಗಾಂಧಿ ತಾತನನ್ನೇ ನೋಡಿದ ಹಾಗೆ ಅಪ್ಪಟ ಸ್ವದೇಶಿ ಪ್ರೇಮದ ಗಾಂಧಿವಾದಿ.

ನಮ್ಮ ಅಜ್ಜ,ರಾಮಕೃಷ್ಣ ಭಟ್ ರಾಯಸರು, ಒಬ್ಬಸ್ವಾತಂತ್ರ್ಯ ಹೋರಾಟಗಾರರು ಎನ್ನುವುದಕ್ಕೆ ತುಂಬಾ ಹೆಮ್ಮೆ ಅನಿಸುತ್ತದೆ. ಈಗಲೂ ನನ್ನ ನೆನಪಿಗೆ ಬರುವುದು ಅದೇ ಹುಲ್ಲು ಹಾಸಿನ ಛಾವಣಿ ಮನೆ ,ಮಣ್ಣಿನಲ್ಲೇ ಒರೆದು ಮಾಡಿದ ಮನೆಯ ನೆಲ, ವಿದ್ಯುದ್ದೀಪವೂ ಕಾಣದ,



ಯಾವ ಆಧುನಿಕ ಸೋಗಿಗೂ ಒಗ್ಗಿಕೊಳ್ಳದ ಹಳ್ಳಿ ಸೊಗಡಿನ ಮನೆ, ಕಿತ್ತು ತಿನ್ನುವ ಕಡುಬಡತನ,ಕುಡಿಯುವ ನೀರಿಗೂ ತತ್ವಾರ, ಸ್ವತಃ ಉಳುಮೆ,ಬೇಸಾಯ ಅಲ್ಲಿಯೂ ಸೋಲು ಕಂಡ ಜೀವನ, ಇಂತಹ ಪರಿಸ್ಥಿತಿಯಲ್ಲೂ ಬದುಕನ್ನು ದಿಟ್ಟತನದಿಂದ ಎದುರಿಸಿದ ಸರಳ ಜೀವಿ.ಸಹೃದಯಿ ನಮ್ಮ ರಾಯಸಜ್ಜ.ರಾಮಕೃಷ್ಣಭಟ್ಟರು.

(5ನೇ ಪುಟಕ್ಕೆ)